# ಹೈದರಾಬಾದ್ ಕರ್ನಾಟಕದಲ್ಲಿ ಸ್ವಾತಂತ್ರ್ಯ ಪೂರ್ವ ದಲಿತ ಚಳುವಳಿ: ಚಾರಿತ್ರಿಕ ವಿಶ್ಲೇಷಣೆ

**ಯಮನೂರಪ್ಪ ವ್ಯಾಕರನಾಳ**
ಸಂಶೋಧಕರು, ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹೈದರಾಬಾದ್ ಕರ್ನಾಟಕ ಕರ್ನಾಟಕದ ಉತ್ತರ ಪೂರ್ವ ಇಲ್ಲವೇ ಈಶಾನ್ಯ ಕರ್ನಾಟಕವನ್ನು ಪ್ರತಿನಿಧಿಸುತ್ತದೆ. ಈ ಪ್ರದೇಶವು ಬೀದರ್ ಕಲಬುರಗಿ ಯಾದಗಿರಿ ರಾಯಚೂರು ಕೊಪ್ಪಳ ಜಿಲ್ಲೆಗಳನ್ನು ಒಳಗೊಂಡಿದೆ. ಕರ್ನಾಟಕದಲ್ಲೇ ಈ ಭಾಗವು ಹಿಂದುಳಿದ ಪ್ರದೇಶ ಎಂಬುವುದು ಎಲ್ಲರಿಗೂ ಚಿರ ಪರಿಚಯವಾಗಿದೆ. ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಮೊದಲ ಗೊಂಡು ಮಾನವ ಅಭಿವೃದ್ಧಿ ಅಂಕಿ ಸಂಖ್ಯೆಗಳು ಹೇಳುವಂತೆ ಈ ಪ್ರದೇಶ ಕರ್ನಾಟಕದಲ್ಲಿ ಮಾತ್ರವಲ್ಲದೆ ಭಾರತದಲ್ಲಿಯೇ ಅತ್ತಿ ಹಿಂದುಳಿದ ಪ್ರದೇಶ. ಈ ಹಿಂದುಳಿವಿಕೆಗೆ ಹಲವಾರು ಕಾರಣಗಳಿವೆ. ಈ ಪ್ರದೇಶದಲ್ಲಿ ಜನರಿಗೆ ಕುಡಿಯುವ ನೀರು ಆಹಾರ ವಸತಿ ಆರೋಗ್ಯ ಶಾಲೆ ಶಿಕ್ಷಣ ಮೊದಲಾದ ಮೂಲಭೂತ ಸೌಲಭ್ಯಗಳಿಂದ ಇಲ್ಲಿನ ಸಂಪ್ರದಾಯಿಕ ಜನಪ್ರತಿನಿದಿಗಳು ಸಾಮಾನ್ಯ ಜನರಿಗೆ ಸಿಗದೇ ಇರುವ ರೀತಿಯಲ್ಲಿ ಬಹಳ ವ್ಯವಸ್ಥಿತವಾಗಿ ನೋಡಿಕೊಂಡು ಬಂದಿದ್ದಾರೆ ಎಂಬುವುದನ್ನು ಕಡೆಗಣಿಸಲಾಗದು. ಹೈದರಾಬಾದ್ ಕರ್ನಾಟಕದಲ್ಲಿ ಪ್ರಾಕೃತಿಕವಾಗಿ ಹರಿಯುವ ಕೃಷ್ಣಾ, ತುಂಗಭದ್ರ ಹಾಗೂ ಭಿಮಾ ಈ ಭಾಗದ ಬಹಳ ದೊಡ್ಡ ನದಿಯಾಗಿದೆ. ಈ ನದಿಗಳು ಈ ಭಾಗದ ಬಹುಭಾಗಕ್ಕೆ ನೀರಿನ ನೆಲೆಗಳಾಗಿವೆ. ಇವುಗಳೊಂದಿಗೆ ಈ ಪ್ರದೇಶದುದ್ದಕ್ಕೂ ಹಲವಾರು ನಗರ, ಉಪನಗರ ಹಾಗೂ ಚಿಕ್ಕಪುಟ್ಟ ಹಳ್ಳಿಗಳಿಂದ ಕೂಡಿಕೊಂಡಿದೆ. ಕುಡಿಯುವ ನೀರು, ಒಕ್ಕಲುತನಕ್ಕಾಗಿ ಹಾಗೂ ಜನರ ಬದುಕು ಬವಣೆಗಳಿಗೆ ಅನುಕೂಲಕರವಾಗುವಂತೆ ಆಯಾ ಕಾಲಕ್ಕೆ ತಕ್ಕಂತೆ ಕೆರೆ ಬಾವಿಗಳನ್ನು ಕಟ್ಟಿಸಿರುವುದು ಇಂದಿಗೂ ಕಂಡುಬರುತ್ತದೆ. ಸ್ವತಂತ್ರ ನಂತರ ಕೃಷ್ಣಾ ನದಿಗೆ ಕಟ್ಟಿರುವ ಬಹುದೊಡ್ಡ ಆಲಮಟ್ಟಿ ಅಣೆಕಟ್ಟು ಆ ನೀರಿನ ಕೇಂದ್ರವಾಗಿ ನಿರ್ಮಿಸಿರುವ ಬಸವಸಾಗರ ರಾಯಚೂರಿನ ಲಿಂಗಸಗೂರು ತಾಲೂಕಿನಲ್ಲಿರುವುದನ್ನು ನೋಡಬಹುದು. ಯಾದಗಿರಿ ರಾಯಚೂರು ಕೊಪ್ಪಳ ಜಿಲ್ಲೆಗಳ ಒಕ್ಕಲುತನಕ್ಕೆ ಇದು ನೀರಿನ ಕೇಂದ್ರವಾಗಿದೆ.

ಹೈದರಾಬಾದ್ ಕರ್ನಾಟಕದ ಭೂಪ್ರದೇಶವು ದೊಡ್ಡ ದೊಡ್ಡ ಕಲ್ಲು ಹಾಗೂ ಮಣ್ಣಿನ ಗುಡ್ಡದ ಸಾಲುಗಳಿಂದ ಕೂಡಿರುವುದನ್ನು ಕಾಣಬಹುದು. ಇವುಗಳಲ್ಲಿ ಮುಖ್ಯವಾಗಿ ಕೊಪ್ಪಳ ಮುದುಗಲ್ ಸುರುಪುರ್ ಶಹಪುರ್ ರಾಯಚೂರು ಮಸ್ಕಿ ಮೊದಲಾದ ಪ್ರದೇಶಗಳಲ್ಲಿರುವ ಗುಡ್ಡಗಳನ್ನು ಉಲ್ಲೇಖಿಸಬಹುದು. ಶಿಲಾಯುಗದ ಕಾಲದಲ್ಲಿಯೇ ಈ ಭಾಗದಲ್ಲಿ ಲೋಹದ ಬಳಕೆ ಇತ್ತು ಎಂದು ಇತಿಹಾಸದಲ್ಲಿ ದಾಖಲೆಗಳಿವೆ. ರಾಯಚೂರಿನ ಹಟ್ಟಿ ಬಂಗಾರದ ಗಣಿಯಲ್ಲಿ ಕಳೆದ ಸುಮಾರು ಎರಡು ಸಾವಿರ ವರ್ಷಗಳಿಂದ ಬಂಗಾರವನ್ನು ಇಂದಿಗೂ ತೆಗೆಯುತ್ತಿದ್ದಾರೆ. ಇಡೀ ದೇಶದಲ್ಲಿ ಹೆಚ್ಚು ಲಾಭದಾಯಕವಾದ ಹೆಚ್ಚು ಸಂಪನ್ಮೂಲ ಇರುವ ಪ್ರದೇಶ ಹಟ್ಟಿ ಯಾಗಿದೆ. ಇದರ ಜೊತೆಗೆ ತಿಂತಿಣಿ ಯಲ್ಲಿ ತಾಮ್ರದ ನಿಕ್ಷೇಪ ದೊರತಿದೆ. ಇತ್ತೀಚಿನ ಸಂಶೋಧನೆ ತೋರಿಸಿ ಕೊಟ್ಟಿರುವಂತೆ ಜಗತ್ ಪ್ರಸಿದ್ಧವಾದ ಕೊಹಿನೂರು ವಜ್ರ ಯಾದಗಿರಿ ಜಿಲ್ಲೆಯ ಕೊಳ್ಳೂರು ಹಳ್ಳಿಯಲ್ಲಿ ದೊರೆಕಿದೆ. ಈ ಎಲ್ಲಾ ಅಂಶಗಳು ಈ ಪ್ರದೇಶದ ಪ್ರಾಕೃತಿಕ ಶ್ರೀಮಂತಿಕೆಯ ಮೇಲೆ ಬೆಳಕು ಚೆಲ್ಲುತ್ತವೆ.

ಶತಶತಮಾನಗಳಿಂದಲೂ ಸಾಮಾಜಿಕ ಅಸಮಾನತೆಯ ಕೂಪದಲ್ಲಿ ಬಿದ್ದು ಮುಳುಗುತ್ತಿರುವ ಈ ರಾಷ್ಟ್ರದ ಬಹುದೊಡ್ಡ ಜನಸಮೂಹದ ಪರ ನಿಂತು ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸುವಲ್ಲಿ ಸಮಾಜ ಸುಧಾರಕರು ಪರಿಶ್ರಮ ದೊಡ್ಡದಾಗಿದೆ. ಇದರ ಮೂಲಕ ಚಳುವಳಿಗಳು ದೇಶಿಯ ನೆಲೆಯಲ್ಲಿ ಸ್ಥಾಪನೆಯಾಗಿ ಗುರುತರವಾದ ಸಾಮಾಜಿಕ ಕಳಕಳಿಯನ್ನು ಪೂರೈಸಿದ್ದಲ್ಲದೆ ಅನುಕರಣೀಯವಾಗಿ ಉಳಿದುಕೊಂಡಿವೆ ಅಂತಹ ಪ್ರಾದೇಶಿಕವಾಗಿ ಹುಟ್ಟಿಕೊಂಡಿರುವಂತಹ ಚಳುವಳಿಗಳಿಗೆ ಮೂಲನೆಲೆ ಹೈದ್ರಾಬಾದ್-ಕರ್ನಾಟಕ ವಾಗಿದೆ.

ಭಾರತದ ಸಮಾಜ ಪರಿವರ್ತನಾ ಚಳುವಳಿಯನ್ನು ಪ್ರಪ್ರಥಮವಾಗಿ ಆರಂಭಿಸಿದವರು ಭಗವಾನ್ ಗೌತಮ ಬುದ್ಧರು. ಇವರ ಚಿಂತನೆ ಮತ್ತು ಸಿದ್ಧಾಂತಗಳು ಸಮಾಜಮುಖಿಯಾಗಿ ಇಡೀ ವಿಶ್ವದಲ್ಲಿಯೇ ಹರಡಿಕೊಂಡಿರುವುದನ್ನು ಚರಿತ್ರೆಯ ಮೂಲಕ ಕಾಣಬಹುದು. ಮಾನವ ಧರ್ಮ ಮನುಷ್ಯ ಪ್ರೀತಿಯ ಜೊತೆಗೆ ಇಡೀ ಜೀವಸಂಕುಲಗಳ ಬಗೆಗೆ ಅಪಾರವಾದ ಪ್ರೀತಿಯ ಸಂರಕ್ಷಣೆಯನ್ನು ಬುದ್ಧರ ತತ್ವಗಳು ಹೊಂದಿವೆ. ಹಾಗಾಗಿ ಬುದ್ಧರ ಚಿಂತನೆಗಳು ಸರ್ವಕಾಲಕ್ಕೂ ಅಗತ್ಯವಿದೆ. ಗೌತಮ ಬುದ್ಧರ ನಂತರದ ಸಂದರ್ಭದಲ್ಲಿ ಹಲವು ಶತಮಾನಗಳ ನಂತರ ೧೨ನೇ ಶತಮಾನದಲ್ಲಿ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯ ಸಂದರ್ಭದಲ್ಲಿ ಸಾಮಾಜಿಕ ಪರಿವರ್ತನಾ ಚಳುವಳಿಯ ಪ್ರಥಮ ಪುರುಷರಾಗಿ ದೇಶದಲ್ಲಿ ತಾಂಡವಾಡುತ್ತಿದ್ದ ಸಾಮಾಜಿಕ ಅಸಮಾನತೆ ಹಾಗೂ ಶೋಷಣೆ ಮೌಢ್ಯ ಜಾತೀಯತೆಯ ವಿರುದ್ಧ ನಿಂತವರು ವಚನ ಚಳುವಳಿಯ ಹರಿಕಾರ ಕಲ್ಯಾಣದ ಬಸವಣ್ಣ. ಈ ಹಿನ್ನೆಲೆಯಲ್ಲಿ ಹೈದ್ರಾಬಾದ್ ಕರ್ನಾಟಕದಲ್ಲಿ ಸ್ವಾತಂತ್ರ್ಯಪೂರ್ವದ ದಲಿತ ಚಳುವಳಿ ಮತ್ತು ಅದು ಸೃಜಿಸಿದ

ಅನನ್ಯ ಜೀವಮುಖಿ ಸಂವೇದನೆಗಳನ್ನು ಕುರಿತು ಬರೆಯುವ ಮುನ್ನ ೧೨ನೇ ಶತಮಾನದ ವಚನ ಚಳುವಳಿಯ ಕುರಿತು ಪ್ರಾಸ್ತಾವಿಕವಾಗಿ ಹೇಳುವುದು ಸೂಕ್ತ.
೧೨ನೇ ಶತಮಾನದಲ್ಲಿ ಬಸವಣ್ಣನು ನಡೆಸಿದ ಸಮಾಜಕಾರ್ಯ ಪ್ರಸ್ತುತ ಸಂದರ್ಭದಲ್ಲೂ ಅನನ್ಯತೆಯನ್ನು ಹೊಂದಿದೆ. ಕರ್ನಾಟಕದಲ್ಲಿ ಮೊಟ್ಟಮೊದಲ ಬಾರಿಗೆ ಹಿಂದುಳಿದ ಸಮುದಾಯಗಳನ್ನು ಮತ್ತು ದಲಿತ ಸಮುದಾಯಗಳನ್ನು ಒಂದುಗೂಡಿಸಿ ಅವರಲ್ಲಿ ಆತ್ಮಶಕ್ತಿ ಆತ್ಮಸ್ಥೈರ್ಯವನ್ನು ತುಂಬಿದ ಕೆಲಸ ಮಾಡಿದವರು ಬಸವಣ್ಣ.

ಸಮಾಜದಲ್ಲಿ ಬೇರೂರಿದ್ದ ಜಾತಿವ್ಯವಸ್ಥೆಯನ್ನು ಅದರ ಅಸಮಾನತೆಯನ್ನು ಕಟುವಾಗಿ ವಿರೋಧಿಸಿ ಅದಕ್ಕೆ ಕಾರಣಕರ್ತರಾದ ವೈದಿಕಶಾಹಿ ವ್ಯವಸ್ಥೆಯನ್ನು ಪ್ರಬಲವಾಗಿ ವಿರೋಧಿಸಿದ ಪ್ರಥಮ ಪುರುಷ ಬಸವಣ್ಣನಾಗಿದ್ದಾನೆ. ಬಸವಣ್ಣನ ಸಮಾಜ ಪರಿವರ್ತನಾ ಚಳವಳಿ ನಾಡಿನ ನಾನಾ ಭಾಗಗಳಿಂದ ಸಾಧಕರನ್ನು ಚಿಂತಕರನ್ನು ಆಕರ್ಷಿಸಿತು. ಕಲ್ಯಾಣದಲ್ಲಿ ನೂರಾರು ಶರಣರು ಒಂದೆಡೆ ಸೇರಿ ಸಮಾವೇಶ ಗೊಂಡರು. ಈ ಸಂದರ್ಭದಲ್ಲಿ ಅನುಭವ ಮಂಟಪ ಸ್ಥಾಪಿಸಿ ಅದರ ಮೂಲಕ ಸಾಮಾಜಿಕ ಸಮಸ್ಯೆಗಳನ್ನು ಮೆಟ್ಟಿ ನಿಂತು ಅವುಗಳಿಗೆ ವಿರೋಧವನ್ನು ವಚನಗಳ ಮೂಲಕ ವ್ಯಕ್ತಪಡಿಸಿರುತ್ತಾರೆ. ಪ್ರಾಚೀನ ಸಾಮಾಜಿಕ ವ್ಯವಸ್ಥೆಯ ಶ್ರೇಣೀಕೃತ ವ್ಯವಸ್ಥೆಯ ವಿರುದ್ಧ ಧ್ವನಿಯೆತ್ತಿ ಸಮಸಮಾಜದ ಪರಿಕಲ್ಪನೆಯನ್ನು ಪ್ರತಿಪಾದಿಸಿದ ಬಸವಣ್ಣನನ್ನು ೧೨ನೇ ಶತಮಾನದ ಸಬಾಲ್ಟರ್ನ್ ಚಿಂತಕ ಎಂದರೆ ತಪ್ಪಾಗಲಾರದು. ಅಂತರ್ಜಾತಿ ವಿವಾಹಕ್ಕೆ ನಾಂದಿ ಹಾಡಿದ, ವಿಧವಾ ವಿವಾಹಕ್ಕೆ ನಾಂದಿ ಹಾಡಿದ, ಮೇಲು-ಕೀಳು ಭಾವನೆಯನ್ನು ತೊರೆದು ಮಾನವ ಕುಲವೆಲ್ಲ ಒಂದೇ ಎಂಬ ಸಾಮಾಜಿಕ ಕ್ರಾಂತಿ ಮಾಡಿದರು. ಸಮ ಸಮಾಜದ ನಿರ್ಮಾಣಕ್ಕಾಗಿ ತನ್ನ ಮೇಲೆ ಏರಿದ್ದ ವೈಧಿಕ ಸಂಪ್ರದಾಯವನ್ನು ತೊರೆದು, ಸಾವಿರಾರು ವರ್ಷಗಳಿಂದ ಶೋಷಣೆಗೆ ಒಳಗಾದ  ಸಮುದಾಯವನ್ನು (ಅಸ್ಪೃಶ್ಯರು) ಅಪ್ಪಿಕೊಂಡರು.

ಅಸ್ಪೃಶ್ಯತೆ ಎನ್ನುವುದು ಇತಿಹಾಸದುದ್ದಕ್ಕೂ ಭಾರತ ಕಟ್ಟಿಕೊಂಡು ಬಂದ ಅನಿಷ್ಟ ಪದ್ಧತಿ. ಈ ಕಳಂಕವನ್ನು ಸಾರಾಸಗಟಾಗಿ ಕಿತ್ತು ಹಾಕುವ ನಿಟ್ಟಿನಲ್ಲಿ ಶ್ರಮಿಸಿದ ವ್ಯಕ್ತಿಗಳಲ್ಲಿ ಬುದ್ಧ, ಬಸವ, ಅಂಬೇಡ್ಕರ್ ಪ್ರಮುಖರಾಗಿದ್ದಾರೆ. ಇವರು ಜಾತಿವ್ಯವಸ್ಥೆಯ ವಿರುದ್ಧ ಗಂಭೀರವಾಗಿಯೇ ಪ್ರತಿಭಟಿಸಿದ್ದಾರೆ. ಅದರೊಂದಿಗೆ ಪ್ರತಿಫಲವನ್ನೂ ಕಂಡುಕೊಂಡಿದ್ದಾರೆ. ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಮಾದಾರ ಧೂಳಯ್ಯ, ಮಡಿವಾಳ ಮಾಚಯ್ಯ ಹೀಗೆ ಅನೇಕ ತಳಸಮುದಾಯದ ವಚನಕಾರರ ಮುಂತಾದ ಹೆಸರುಗಳು ಇತಿಹಾಸದಲ್ಲಿ ಅಜರಾಮರವಾಗಿ ಉಳಿದಿವೆ. ಇದಕ್ಕೆಲ್ಲ ಶರಣರಲ್ಲಿಯೇ ಅಗ್ರಗಣ್ಯರಾದ ಬಸವಣ್ಣನವರ ಶ್ರಮವೇ ಇಲ್ಲಿ ಪ್ರಮುಖ ಕಾರಣವಾಗಿರುತ್ತದೆ. ಸರ್ವಜ್ಞ ಕನಕ-ಪುರಂದರ ಅಂತಹ ಮಹಾನ್ ವಿಚಾರವಾದಿಗಳು ಜಾತಿ-ಕುಲ ಗೋತ್ರಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದವರನ್ನು ಜಾತಿಯೊಂದೇ ಎಲ್ಲಾದಕ್ಕು ಮುಖ್ಯವೆಂದು ನಂಬಿದವರನ್ನು ಸಾಹಿತ್ಯಿಕ ನೆಲೆಯಲ್ಲಿ ಖಂಡಿಸಿರುವುದು ಗಮನಾರ್ಹವಾದುದು. ಬುದ್ಧ, ಬಸವ, ಕನಕ-ಪುರಂದರ ಸರ್ವಜ್ಞ ಮುಂತಾದವರು ಸಾಮಾಜಿಕ ಅನಿಷ್ಟಗಳ ವಿರುದ್ಧ ಸ್ವಾತಂತ್ರ್ಯಪೂರ್ವದಲ್ಲೇ ಪ್ರತಿಭಟಿಸಿರುವುದರಿಂದ ಈ ಪ್ರದೇಶದಲ್ಲಿ ಶೋಷಣೆಗೊಳಪಟ್ಟಿರುವ ಸಮುದಾಯಕ್ಕೆ ಒಂದಿಷ್ಟು ಸ್ಥಾನಮಾನಗಳು ಕಾಣಲು ದೊರೆತಿವೆ.

ಹೈದರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿ ೧೭-೧೮ ನೇ ಶತಮಾನದಲ್ಲಿ ನೂರಾರು ಮಂದಿ ತತ್ವ ಪದಗಳನ್ನು ಬರೆದು ತತ್ವಪದಕಾರರು ಎಂದು ಕರೆಸಿಕೊಂಡಿದ್ದಾರೆ. ಅಂಥವರಲ್ಲಿ ಶಿಶುನಾಳ ಶರೀಫ ಕಡಕೋಳ ಮಡಿವಾಳಪ್ಪ ಇವರು ತಮ್ಮ ತತ್ವಪದಗಳಲ್ಲಿ ಅಂಧಕಾರ, ಅಜ್ಞಾನ, ಮೌಢ್ಯತೆ ಹಾಗೂ ಸಮಾಜದಲ್ಲಿ ಜಾರಿಯಲ್ಲಿರುವ ಮೇಲು-ಕೀಳು ಕುರಿತು ಅರಿವು ಮೂಡಿಸುವ ಕೆಲಸ ಮಾಡಿರುವುದು ಚಾರಿತ್ರಿಕ ಸತ್ಯವಾಗಿದೆ.
ಹೈದರಾಬಾದ್ ಕರ್ನಾಟಕದಲ್ಲಿ ಸ್ವಾತಂತ್ರ್ಯಪೂರ್ವದ ದಲಿತ ಚಳುವಳಿಯನ್ನು ನೋಡುವುದಾದರೆ ದಕ್ಷಿಣದ ಅಂಬೇಡ್ಕರ್ ಎಂದೇ ಖ್ಯಾತರಾದ ಬಿ ಶ್ಯಾಮಸುಂದರ್ ಅವರು ಮುಖ್ಯವಾಗಿದ್ದಾರೆ. ಬಿ ಶಾಮಸುಂದರ್ ಅವರು ಹೈದರಾಬಾದ್ ಕರ್ನಾಟಕದ ಗುಲ್ಬರ್ಗದಲ್ಲಿ ಬದುಕಿ ದಲಿತ ಚಳುವಳಿಗೆ ನಾಂದಿ ಹಾಡಿದವರಾಗಿದ್ದಾರೆ. ದಲಿತ ಲೋಕದ  ಉದ್ಧಾರಕ್ಕಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟ ಶಾಮಸುಂದರ್ ಅವರ ಸಾಧನೆ ನಮ್ಮನ್ನು ಬೆರಗುಗೊಳಿಸುವಂತೆ ಮಾಡುತ್ತದೆ.

ಸಾವಿರಾರು ವರ್ಷಗಳಿಂದಲೂ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ದೂರ ಇರಿಸಲಾದ ಕೆಳವರ್ಗದವರನ್ನು ಮೇಲೆತ್ತಲು ೧೯೬೮ರಲ್ಲಿ 'ಭಾರತೀಯ  ಭೀಮಸೇನೆ' ಎಂಬ ಸಂಘಟನೆಯನ್ನು ಸ್ಥಾಪಿಸಿ ಅದರ ಮೂಲಕ ದಲಿತರ ಅಭಿವೃದ್ಧಿಗಾಗಿ ಅವಿರತವಾಗಿ ಶ್ರಮಿಸಿದ್ದಾರೆ. ಹೈದರಾಬಾದ್ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕಾನೂನು ಪದವಿಯನ್ನು ಪಡೆದ ಬಿ.ಶಾಮಸುಂದರ್ ಅವರು ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎಂಬ ಸಾಮಾಜಿಕ ಚಿಂತನೆಯಲ್ಲಿ ತೊಡಗಿಕೊಂಡಿದ್ದರು. ಬಿ.ಶಾಮಸುಂದರ್ ಅವರು ಮನಸ್ಸು ಮಾಡಿದ್ದರೆ ಅವರಿಗಿದ್ದ ಪ್ರಬುದ್ಧತೆಯಿಂದ ಉನ್ನತ ದರ್ಜೆಯ ಅಧಿಕಾರಿ ಆಗಬಹುದಿತ್ತು. ಆದರೆ ಅವರು ಹಾಗೆ ಮಾಡದೆ ಸರಕಾರಿ ನೌಕರಿ ಎಂಬ ಜೀತ ತೊರೆದು ತನ್ನ ಜನಾಂಗದ ಸಾಮಾಜಿಕ ಸಮಸ್ಯೆಗಳ ವಿಮೋಚನೆಗಾಗಿ ತಮ್ಮನ್ನು ತಾವೇ ಸಮರ್ಪಿಸಿಕೊಂಡರು.

ಶತಶತಮಾನಗಳಿಂದಲೂ ಶಿಕ್ಷಣವೆಂಬುದು ಉಳ್ಳವರ ಸ್ವತ್ತಾಗಿತ್ತು. ಅದರಲ್ಲೂ ಮಡಿವಂತ ವೈದಿಕರ ಹಿಡಿತದಲ್ಲಿತ್ತು. ಇದನ್ನು ಅರಿತ ಸುಶಿಕ್ಷಿತರಾದ ಬಿ.ಶ್ಯಾಮಸುಂದರ್ ನಿಜಾಮರ ಸಂಸ್ಥಾನದಲ್ಲಿರುವ ೪೦ ಲಕ್ಷಕ್ಕೂ ಹೆಚ್ಚು ಅಸ್ಪೃಶ್ಯರನ್ನು ಅಜ್ಞಾನದಿಂದ ವಿಮೋಚನೆಗೊಳಿಸಿ ಸಂಸ್ಥಾನದಲ್ಲಿರುವ ಅಸ್ಪೃಶ್ಯರ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣವೆಂಬುದು ಬಹಳ ಮುಖ್ಯ ಎಂದು ಮನಗಂಡಿದ್ದ ಶ್ಯಾಮಸುಂದರರು ನಿಜಾಮರ ಸಂಸ್ಥಾನದಿಂದ ಒಂದು ಕೋಟಿ ಮೌಲ್ಯದ ನಿಧಿಯನ್ನು ೧೯೪೨ ರಲ್ಲಿ ಸ್ಥಾಪಿಸಿಲಾಯಿತು. ಅದರ ಮೂಲಕ ಶಿಕ್ಷಣದಿಂದ ವ್ಯವಸ್ಥಿತವಾಗಿ ದೂರವಿರಿಸಿದ ಅಸ್ಪೃಶ್ಯರ ಶೈಕ್ಷಣಿಕ ಅಭಿವೃದ್ಧಿ ಮಾಡಿದರು.

ನಿಜಾಮರ ಸಂಸ್ಥಾನದಲ್ಲಿರುವ ಅಸ್ಪೃಶ್ಯರು ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣದಷ್ಟೇ ಮಹತ್ವದ್ದು ಭೂ ಒಡೆತನವು ಒಂದಾಗಿದೆ. ಆದ್ದರಿಂದ ಭೂಮಿ ಹಂಚಿಕೆ ಯಾಗಬೇಕು ಎಂಬುದು ಬಿ. ಶಾಮಸುಂದರ್ ಅವರ ನಿಲುವಾಗಿತ್ತು. ಅಸ್ಪೃಶ್ಯರು ಪ್ರಬಲ ಜಾತಿಯ ಭೂ ಒಡೆಯರ ಜೀತಪದ್ಧತಿಯನ್ನು ತೊರೆದು ಸ್ವತಂತ್ರ ಜೀವನ ನಡೆಸುವಂತಾಗಲು ವಿಶೇಷ ಕಾನೂನೊಂದನ್ನು ಜಾರಿಗೆ ತರುವಲ್ಲಿ ಶ್ಯಾಮಸುಂದರ್ ಸಫಲರಾಗುತ್ತಾರೆ. ಆ ಕಾನೂನಿನ ಪ್ರಕಾರ ಉಳುವವನೇ ಭೂಮಿಯ ಒಡೆಯ ಎಂದು ಘೋಷಿಸಲಾಯಿತು. ಎಪ್ಪತ್ತರ ದಶಕದ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಅಂದಿನ ಪ್ರಭುತ್ವವು ಭೂಮಿಯನ್ನು ರಾಷ್ಟ್ರೀಕರಣ ಮಾಡಿ ಉಳುವವನೆ ಭೂ ಒಡೆಯ ಎಂಬ ಕಾನೂನಾತ್ಮಕವಾಗಿ ಘೋಷಣೆ ಮಾಡಿತ್ತು. ಆದರೆ ಅದಕ್ಕೂ ಪೂರ್ವದಲ್ಲಿ ಅಂದರೆ ಸ್ವಾತಂತ್ರ್ಯಪೂರ್ವದಲ್ಲಿ ವಿಶೇಷವಾಗಿ ಹೈದ್ರಾಬಾದ್ ಕರ್ನಾಟಕದಲ್ಲಿ ಉಳುವವನೇ ಭೂಮಿಯ ಒಡೆಯ ಎಂಬ ಪರಿಕಲ್ಪನೆಯನ್ನು ಹುಟ್ಟುಹಾಕಿ ಅದರ ಮೂಲಕ ಅಸ್ಪೃಶ್ಯರಿಗೆ ಭೂಮಿ ಹಂಚಿಕೆ ಯನ್ನು ಹೋರಾಟದ ಮೂಲಕ ಸರ್ಕಾರದ ಯಾವುದೇ ಅನಾಮತ್ತಾದ ಜಮೀನಿದ್ದರೂ ಅದನ್ನು ಭೂಹೀನರಿಗೆ ಹಂಚುವ ಕಾರ್ಯಕ್ರಮಕ್ಕೆ ನಿಜಾಮರ ಸರಕಾರದ ಅನುಮತಿಯನ್ನು ಕೊಡಿಸಿ ಸಾವಿರಾರು ಅಸ್ಪೃಶ್ಯರನ್ನು ಭೂ ಒಡೆಯರನ್ನಾಗಿ ಮಾಡಿದ ಕೀರ್ತಿ ಬಿ.ಶಾಮಸುಂದರ್ ಅವರಿಗೆ ಸಲ್ಲುತ್ತದೆ.

ಸಂಪ್ರದಾಯವಾದಿಗಳು ಯಾರನ್ನು ಶೂದ್ರರು, ದಾಸರು, ದಸ್ಯುಗಳು, ರಾಕ್ಷಸರು, ಎಂದೆಲ್ಲ ಕರೆಯುತ್ತಿದ್ದರೋ ಅವರೆಲ್ಲ ಭಾರತದ ಮೂಲನಿವಾಸಿಗಳು ಎಂದು ಸಂಶೋಧನೆಗಳ ಮೂಲಕ ಪ್ರತಿಪಾದಿಸುವಲ್ಲಿ ಶಾಮಸುಂದರ್ ಅವರು ಬಹಳ ಮುಖ್ಯವಾಗಿ ಕಾಣುತ್ತಾರೆ. ದಲಿತರ ಉದ್ಧಾರಕ್ಕಾಗಿ ಜನಸಂಘಟನೆ ಮಾಡುತ್ತಾರೆ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೂಲ ತತ್ವಗಳಾದ ಶಿಕ್ಷಣ ಸಂಘಟನೆ ಹೋರಾಟ ಎಂಬ ತ್ರಿವಳಿ ಸೂತ್ರಗಳನ್ನು ಇಟ್ಟುಕೊಂಡು ಶ್ಯಾಮಸುಂದರ್ ಡಾ.ಬಿ.ಆರ್. ಅಂಬೇಡ್ಕರ್ ಅವರ ೭೭ನೇ ಹುಟ್ಟುಹಬ್ಬದಂದು ೨೯-೦೪-೧೯೬೮ ರಲ್ಲಿ ಅಂದರೆ ಸರಿಸುಮಾರು ಐದು ದಶಕಗಳ ಹಿಂದೆ ಭಾರತೀಯ ಭೀಮಸೇನ ಎಂಬ ಸಂಘಟನೆಯನ್ನು ಗುಲ್ಬರ್ಗದ ಹೃದಯ ಭಾಗವಾದ ಜಗತ್ ಸರ್ಕಲ್‌ನಲ್ಲಿ ಉದ್ಘಾಟಿಸಿದರು. ಇದರ ಸಂಸ್ಥಾಪನ ಅಧ್ಯಕ್ಷರಾಗಿ ಶಾಮಸುಂದರ್ ಆ ಮೂಲಕ ಅವರು ಮಾಡಿದ ಜನಜಾಗೃತಿ ಅನನ್ಯವಾದದ್ದು, ಇಂದಿಗೂ ಅಂದು ಅವರು ಮಾಡಿದ ಹೋರಾಟಗಳಿಂದ ತಿಳಿಯಬಹುದು. ಹಾಗಾಗಿ ಈ ಭಾಗದ ಸ್ವಾತಂತ್ರ್ಯಪೂರ್ವದ ದಲಿತ ಚಳುವಳಿಯ ನೇತಾರ ಬಿ.ಶ್ಯಾಮಸುಂದರ ಅವರೇ ಎಂದರೆ ಅತಿಶಯೋಕ್ತಿಯಾಗಲಾರದು.
ಈ ಎಲ್ಲಾ ಹಿನ್ನೆಲೆಯನ್ನು ಗಮನಿಸಿದಾಗ ಹೈದ್ರಾಬಾದ್ ಕರ್ನಾಟಕದಲ್ಲಿ ಸ್ವಾತಂತ್ರ್ಯಪೂರ್ವ ದಲಿತ ಚಳುವಳಿಗಳ ಚಿತ್ರಣವನ್ನು ಕಾಣಬಹುದು. ಶತಶತಮಾನಗಳಿಂದಲೂ ಶೋಷಣೆ ಅಸ್ಪೃಶ್ಯತೆ ಜಾತೀಯತೆ ಈ ರೀತಿಯ ಅನೇಕ ಅನಿಷ್ಟ ಪದ್ಧತಿಗಳನ್ನು ಸಂಪ್ರದಾಯವಾದಿಗಳು ಅಸ್ಪೃಶ್ಯರ ಮೇಲೆ ಏರಿದ್ದ ಸಂದರ್ಭದಲ್ಲಿ ಬಸವಾದಿ ಶರಣರು ತತ್ವಪದಕಾರರ ಈ ಮೌಢ್ಯಗಳ ವಿರುದ್ಧ ಅಸಮಾನತೆಯ ವಿರುದ್ಧ ಶೋಷಣೆಯ ವಿರುದ್ಧ ನಿಂತು ತಮ್ಮ ಚಿಂತನೆಗಳನ್ನು ಹುಟ್ಟುಹಾಕಿ ಅವುಗಳ ಮೂಲಕ ಅಸಮಾನತೆಯನ್ನು ಅಸ್ಪೃಶ್ಯತೆಯನ್ನು ಪ್ರಶ್ನೆ ಮಾಡಿದರು. ಹಾಗಾಗಿ ಈ ಬಸವಾದಿ ಶರಣರ ತತ್ವಪದಕಾರರ ನೇರವಾದ ಪ್ರಭಾವ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಮೇಲಾಗಿರುವುದನ್ನು ಚಾರಿತ್ರಿಕ ಅಂಶಗಳಿಂದ ತಿಳಿಯಬಹುದಾಗಿದೆ. ಆದ್ದರಿಂದ ಈ ಎಲ್ಲಾ ಸಾಮಾಜಿಕ ಪರಿವರ್ತನಾ ಚಳುವಳಿಗಳನ್ನು ಹೈದರಾಬಾದ್ ಕರ್ನಾಟಕದಲ್ಲಿನ ಸ್ವಾತಂತ್ರ್ಯಪೂರ್ವದ ದಲಿತ ಚಳುವಳಿ ಎನ್ನಬಹುದು.

**ಪರಾಮರ್ಶನ ಗ್ರಂಥಗಳು**

1. ಅಮರೇಶ ನುಗಡೋಣಿ., ೨೦೧೪, 'ತತ್ವಪದ ಸಾಹಿತ್ಯ ಅಧ್ಯಯನ', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಚಿನ್ನಸ್ವಾಮಿ ಎನ್ ಸೋಸಲೆ., ೨೦೧೫, 'ದಲಿತ ಚರಿತ್ರೆ ರಚನೆಯಲ್ಲಿ ಕಾಡಲೇಬೇಕಾದ ಪ್ರಶ್ನೆಗಳು', ಗೀತಾಂಜಲಿ ಪ್ರಕಾಶನ, ಶಿವಮೊಗ್ಗ.

3. ಚಿನ್ನಸ್ವಾಮಿ ಎನ್ ಸೋಸಲೆ., ೨೦೧೬, 'ಕರ್ನಾಟಕದ ಸಮಗ್ರ ದಲಿತ ಚರಿತ್ರೆ', ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು.
4. ಚಿನ್ನಸ್ವಾಮಿ ಎನ್ ಸೋಸಲೆ., ೨೦೧೨, 'ದಲಿತರ ಬದುಕು-ಮೆಲಕು', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
5. ಚಾಪಗಾವಿ ಆರ್ ಎಸ್., ೨೦೧೧, 'ಕಲ್ಯಾಣದ ಕ್ರಾಂತಿಕಾರರು', ಪ್ರಕಾಶನ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
6. ಪ್ರಶಾಂತ ನಾಯಕ ಜಿ., ೨೦೧೬, 'ವಚನಕಾರರು ಮತ್ತು ಅಂಬೇಡ್ಕರ್', ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ.
7. ಪೋತೆ. ಎಚ್. ಟಿ., ೨೦೧೨, 'ಬಿ.ಶ್ಯಾಮಸುಂದರ್', ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
8. ಪೋತೆ. ಎಚ್. ಟಿ., ೨೦೧೩, 'ಸ್ವಾತಂತ್ರ್ಯ ಪೂರ್ವದ ದಲಿತ ಚಳವಳಿ', ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
9. ಬಸವರಾಜ ಕೋಡಗುಂಟಿ., ೨೦೧೬, 'ಹಯ್ದರಾಬಾದ ಕನಾಟಕ', ಬಂಡಾರ ಪ್ರಕಾಶನ, ಮಸ್ಕಿ.
10. ಬಸಣ್ಣಾ ಸಿಂಗೆ., ೨೦೧೭, 'ದಲಿತ ಹೋರಾಟದ ಹೆಜ್ಜೆ ಗುರುತುಗಳು', ಡಾ.ಬಿ.ಆರ್.ಅಂಬೇಡ್ಕರ್ ವಿಶ್ವಸ್ಥ ಮಂಡಳಿ ಪ್ರಕಾಶನ, ಕಲಬುರಗಿ.
11. ಮುನಿವೆಂಕಟಪ್ಪ ವಿ., ೨೦೦೮, 'ದಲಿತ ಚಳವಳಿ ಮತ್ತು ಸಾಹಿತ್ಯ', ತನುಮನ ಪ್ರಕಾಶನ, ಮೈಸೂರು.
12. ವೀರಯ್ಯ ಡಿ.ಎಸ್., ೨೦೦೫, 'ದಲಿತ ಚಿಂತನೆ', ಪಿತಾಮಹ ಪ್ರಕಾಶನ, ಬೆಂಗಳೂರು.
13. ವೆಂಕಟೇಶ ಮೂರ್ತಿ ಎಚ್. ಟಿ., ೨೦೦೬, 'ಸಮಾಜ ಪರಿವರ್ತನಾ ಚಳುವಳಿ ಮತ್ತು ಕರ್ನಾಟಕದ ದಲಿತ ಚಳುವಳಿ', ಈಶ್ವರಿ ಪ್ರಕಾಶನ, ಮೈಸೂರು. ಹೈದರಾಬಾದ್ ಕರ್ನಾಟಕ ಭೌಗೋಳಿಕತೆ, ಬಸವ ಚಳವಳಿ, ಬಿ ಶ್ಯಾಮಸುಂದರ್ ಕಾಲದ ದಲಿತ ಚಳವಳಿ.